ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಾಕ್ಷಿದಾರನ ಹೆಸರುಃ- ಉಮೇಶ
ತಂದೆ ಹೆಸರು ಃ- ಗಂಗಣ್ಣ
ವಯಸ್ಸು ಃ- 30 ವರ್ಷ
ಉದ್ಯೋಗ ಃ- ಚಾಲಕ
ವಾಸ ಃ- ಸಂಡೇಮಾರ್ಗೋನಹಳ್ಳಿ

<u>ಸಾಕ್ಷಿಗೆ ದಿಃ **16.02.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.</u>**

ಈ ಪ್ರಕರಣದ ಬಗ್ಗೆ ನನಗೆ ಏನೂ ಗೊತ್ತಿಲ್ಲ. ನಾನು ಈ ಪ್ರಕರಣದ ವಿಚಾರವರಾಗಿ ಯಾವುದೇ ದೂರನ್ನು ನೀಡಿಲ್ಲ. ಸಾಕ್ಷಿಗೆ ದಿಃ 07-12-2020 ರ ದೂರನ್ನು ತೋರಿಸಲಾಗಿ ಅದನ್ನು ನಿಪಿ.6 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ನಿಪಿ-6 ಕ್ಕೆ ನಾನು ಅಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ಸಾಕ್ಷಿಗೆ ಶವಪರೀಕ್ಷಾ ವರದಿಯನ್ನು ತೋಸಲಾಗಿ ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲಿಗಾಗಿ ನ್ಯಾಯಾಲಯದ ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಗಿದೆ.)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದ.**

ದಿಃ 06-12-2021 ರಂದು ನನ್ನ ತಂದೆ , ತಾಯಿ , ಚಾಸಾ.2 ಟಿ.ವಿ.ಎಸ್ ಎಕ್ಸೆಲ್ ನಲ್ಲಿ ಹೋಗುವಾಗ ನಾಗಸಂದ್ರಕಡೆಯಿಂದ ಸಿ ಎಸ್ ಪುರ ಕಡೆಗೆ ಹೊಗಲು ಬಂದ ಕೆಎ-02-ಎನ್-ಕೆ-166 ಕಾರು ಬಂದು ನಮ್ಮ ತಂದೆಯವರಿಗೆ ಚಲಾಯಿಸುತ್ತಿದ್ದ ಬೈಕ್ ಗೆ ಡಿಕ್ಕಿಪಡಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಾಯಿ ದಿಃ 07-12-2021 ರಂದು ಬೆ-10-25 ಕ್ಕೆ ಆದಿಚಿಂಚನಗಿರಿ ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ.ಸದರಿ ವಿಚಾರವಾಗಿ ನಾನು ದಿಃ 07-12-2021 ರಂದು ದೂರನ್ನು ನೀಡಿರುತ್ತೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಏನೂ ಇಲ್ಲ ಎಂದು ತಿಳಿಸಿರುತ್ತಾರೆ.**

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**
**ಕುಣಿಗಲ್.**